**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 1120/2022**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿ ಃ ಭದ್ರಿನಾಥ**

**ದೋಷರೋಪಣೆ**

ನಾನುಃ **ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ** ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ ಆದ ನಾನು ಆರೋಪಿಯಾದ

| | |
|---|---|
| ಆರೋಪಿ | ಭದ್ರಿನಾಥ ತಂದೆ ಜ್ಞಾನೇಶ್ವರ, |

**ನಿಮ್ಮ ವಿರುದ್ಧ ದೋಷಿಸುವ ಆಪಾದನೆ ಏನೆಂದರೆ,**

ದಿನಾಂಕಃ 18-08-2021 ರಂದು ಆರೋಪಿಯಾದ ನೀನು ನೇದ್ದವನು ನಿನ್ನ ಮೋಬೈಲ ನಂ. 9848061041 ನೇದ್ದರಿಂದ ಚಾಸಾಃ1 ನೇದ್ದವನ ಮೋಬೈಲ್ ನಂಬರ, 9448333391 ನೇದ್ದಕ್ಕೆ ಕರೆ ಮಾಡಿ ಪೌಲುಟರಿ ಪಾರ್ಮ ಸಲುವಾಗಿ 283 ಕ್ವಿಂಟಲ 'ಕನಕಿ' ಬೇಕಾಗಿದೆ ಕಳುಹಿಸಿರಿ ನಂತರ ಪೆಮೆಂಟ್ ಮಾಡುತ್ತೇನೆ ಅಂತಾ ತಿಳಿಸಿದಾಗ ಚಾಸಾಃ 1 ನೇದ್ದವನು 'ನವೀನ ಇಂಡಸಟೀಸ್ ಇನವಾಯಿಸ ನಂ.1814 ನೇದ್ದರ ಮುಖಾಂತರ ಯಾದಗಿರಿ ನಗರದಲ್ಲಿರುವ 'ಬಿಸ್ಮಿಲ್ಲಾ ಟ್ರಾನ್ಸಪೋರ್ಟರ್ (ಟ್ರಾನ್ಸಪೋರ್ಟ ಮುಖಾಂತರ) ಲಾರಿ ನಂ. ಕೆ.ಎ-33-4989 ನೇದ್ದರಲ್ಲಿ 283 ಕ್ವಿಂಟರ ಕನಕಿ ಲೋಡ ಮಾಡಿದ ನಂತರ ಲಾರಿ ಚಾಲಕ ಚಾಸಾಃ 6 ನೇದ್ದವನ ದಿನಾಂಕಃ 19-08-2021 ರಂದು ಬೆಳಗ್ಗೆ 'ದುರ್ಗಾ ಭವಾನಿ ಟ್ರೇಡರ' ಎಲ.ಬಿ. ನಗರ ಹೈದ್ರಾಬಾದ ಹೋಗಿ ಮುಟ್ಟಿದಾಗ ಚಾಸಾಃ6 ನೇದ್ದವನು

ಆರೋಪಿತನಿಗೆ ಕರೆ ಮಾಡಿದಾಗ ಈ ಕನಕಿ ಲಾರಿಯನ್ನು ಹೈದ್ರಾಬಾದ ನಗರದ ಕಡತಾಲದಲ್ಲಿರುವ ಒಂದು ಪೌಲುಟರಿ ಫಾರ್ಮದಲ್ಲಿ ಅನಲೋಡ ಮಾಡಬೇಕು ಅದರ ಕಿರಾಯ ಕೊಡುತಿನಿ ಅಂತಾ ಹೇಳಿದ್ದರಿಂದ ಕನಕಿ ಲಾರಿಯನ್ನು ಕಡತಾಲದಲ್ಲಿರುವ 'ವೀರಯ್ಯ ಪೌಲುಟರಿ ಫಾರ್ಮ'ದಲ್ಲಿ ಆನಲೋಡ ಮಾಡಿಸಿ ಚಾಸಾಃ 6 ನೇದ್ದವನಿಗೆ ಲಾರಿ ಕಿರಾಯ ಕೊಟ್ಟು ಕಳುಹಿಸಿದ್ದು ಇರುತ್ತದೆ. ಲಾರಿ ಅನಲೋಡ ಆದ ನಂತರ ಚಾಸಾಃ 1 ನೇದ್ದವನು ಆರೋಪಿತನಿಗೆ ಪೋನ್ ಮಾಡಿ ಪೇಮೆಂಟ ಮಾಡಲು ಹೇಳಿದಾಗ ಇವತ್ತು ನಾಳೆ ಮಾಡತಿನಿ ಅಂತಾ ಹೇಳುತ್ತಾ ಬಂದಿದ್ದು, ಸದರಿ ಆರೋಪಿಯಾದ ನೀನು ದೂರುದಾರನಿಗೆ 4 ಲಕ್ಷ ರೂಪಾಯಿ ಯುನಿಯ್ಯನ್ ಬ್ಯಾಂಕ್ ಚೆಕ್ ಮುಂಖಾತರ ಕಳುಹಿಸುತ್ತಿದ್ದೇನೆ ಅಂತಾ ಹೇಳಿ ಮೋಸ ಮಾಡಿರುತ್ತಾನೆ. ದಿನಾಂಕ 24-08-2020 ರಂದು ಆರೋಪಿಯಾದ ನೀನು ದೂರುದಾರನಿಗೆ ಎಸ್.ಬಿ.ಐ ಬ್ಯಾಂಕ್ ಸ್ಲಿಪ್ ವಾಟಸಪ್ ಮಾಡಿ 3 ಲಕ್ಷ ರೂಪಾಯಿ ಚಕ್ ಮೂಲಕ ಆರ್.ಟಿ.ಜಿ.ಎಸ್ ಮೂಲಕ ಹಣ ಕಳುಹಿಸಿರುತ್ತೇನೆಂದು ವಾಟಸ್ಪ ಮಾಡಿರುತ್ತಿರಿ, ಮುಂದುವರೆದು, ಆದರೆ ಯಾವುದೇ ಹಣ ಚಾಸಾಃ1 ರವರ ಖಾತೆಗೆ ಜಮಾ ಆಗಿರುವುದಿಲ್ಲ. ನಂತರ ದಿನಾಂಕ 25-08-2021 ರಂದು ಆರೋಪಿಯಾದ ನೀನು ಬ್ಯಾಂಕ್ ಮೂಲಕ ಚಾಸಾಃ1 ರವರಿಗೆ 70 ಸಾವಿರ ರೂಪಾಯಿ ಕಳುಹಿಸಿ ಊಳಿದ ಹಣ 2 ಮತ್ತು 3 ದಿನಗಳಲ್ಲಿ ಕಳುಹಿಸಿಕೊಡುತ್ತೇನೆಂದು ಹೇಳಿರುತ್ತಾನೆ. ಆದರೆ ಯಾವುದೇ ಹಣ ಕಳುವುಸಿರುವುದಿಲ್ಲ. ತದನಂತರ ಆರೋಪಿತನು ಚಾಸಾಃ7 ರವರ ಕೈಯಲ್ಲಿ 3,70,000/- ಚೆಕ್ ನೀಡಿ ದಿನಾಂಕ 09-09-2021 ರಂದು ಚಕ್ ಪಾಸ್ ಮಾಡಿಕೊಳ್ಳರಿ ಎಂದು ಹೇಳಿರುತ್ತಾನೆ. ಆದರೆ ಬ್ಯಾಂಕ್ ಮ್ಯಾನೇಜರ್ ಹೆಸರು ತಪ್ಪು ಇರುತ್ತದೆ ಎಂದು ಹೇಳಿರುತ್ತಿಯಾ, ಈ ಮೂಲಕ ನೀವು ಭಾ.ದಂ.ಸಂ. 420, 468, ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 24-06-2025**

**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**

**ನ್ಯಾಯಾಧೀಶರು ಯಾದಗಿರಿ.**